ಸಂಸ್ಥೆಯಿಂದ ತರಬೇತಿ ನೀಡಿದಾಗ ಬೇರೆ ಯಾರೂ ಗ್ರಾಮದಿಂದ ತರಬೇತಿಗಾಗಿ ಮುಂದೆ ಬರಲಿಲ್ಲ.

ಸದರಿ ಗುತ್ತಿಗೆದಾರರು ಕೆರೆಯನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ. ಅದಕ್ಕಾಗಿ ಒಂದು ಚಿಕ್ಕ ತೊಟ್ಟಿಯನ್ನು ಕೆರೆಯ ಸಮೀಪದಲ್ಲಿ ಕಟ್ಟಿರುತ್ತಾರೆ.

ಈಗ ಮಿಾನುಗಾರಿಕೆ ಅಭಿವೃದ್ಧಿಗಾಗಿ ಕೆರೆಯಲ್ಲಿ ಕೋಳಿ ಗೊಬ್ಬರ, ಸಗಣಿ ಮತ್ತು ರಾಸಾಯನಿಕ ಗೊಬ್ಬರವನ್ನು ಹಾಕಿರುತ್ತಾರೆ. ಆದ್ದರಿಂದ ನೀರಿನಲ್ಲಿ ಬದಲಾವಣೆ ಆಗುವುದು ಸಹಜ.

ಸದರೀ ಗ್ರಾಮದಲ್ಲಿ ಇರುವುದು ಇದೊಂದೆ ಕೆರೆಯಾದ್ದರಿಂದ ಈ ಸಮಸ್ಯೆಯುಂಟಾಗಿದೆ. ಇದರಿಂದಾಗಿ ದನಕರುಗಳು ಸತ್ತಿರುವುದು, ಜನರಿಗೆ ಕಿರುಕುಳ ಉಂಟಾಗಿರುವುದು ನಮ್ಮ ಗಮನಕ್ಕೆ ಬಂದಿರುವುದಿಲ್ಲ, ಇದರ ಬಗ್ಗೆ ವಿಚಾರಿಸಲಾಗುವುದು.

ಈ ಪ್ರಯುಕ್ತವಾಗಿ ಈ ಕೆರೆಯ ಬಗ್ಗೆ ಗುತ್ತಿಗೆದಾರರು ಮತ್ತು ಗ್ರಾಮಸ್ಥರ ನಡುವೆ ಹೊಂದಾಣಿಕೆ ತರಲು ಮಿಾನು ಕೃಷಿಕರ ಅಭಿವೃದ್ಧಿ ಸಂಸ್ಥೆಗೆ ತಿಳಿಸಲಾಗುವುದು.

ಸಂಬಂಧಪಟ್ಟ ಮಿಾನುಗಾರಿಕೆ ವಿಸ್ತರಣಾಧಿಕಾರಿಯನ್ನು ವರ್ಗಾವಣೆ ಮಾಡಲು ಪರಿಶೀಲಿಸಲಾಗುವುದು.

ಓ) ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡದ ಸಹಕಾರಿ ಸಂಘಗಳ ಸಾಲಗಳವಸೂಲಿಗಾಗಿ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವ ಬಗ್ಗೆ

6 ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡದ ಸಹಕಾರ ಸಂಘಗಳ ಸಾಲಗಳ ವಸೂಲಿಗಾಗಿ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವ ಬಗ್ಗೆ

ಶ್ರೀ ಸಿ. ಎಂ. ರೇವಣ್ಣಸಿದ್ದಯ್ಯ.—ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡದ ಸಹಕಾರಿ ಸಾಲಗಳ ವಸೂಲಿಗಾಗಿ ರೈತರ ಭೂಮಿಯನ್ನು ಜಿಲ್ಲೆಯ ಡಿ.ಸಿ. ಯವರೇ ಯಾಲಂ ಮಾಡಿ ಸರ್ಕಾರದ ಸ್ವಾಧೀನ ಮಾಡಿಕೊಂಡಿರುವರು. ರೈತ ಸಂಘದ ಬೇಡಿಕೆಯನ್ನು ಮನ್ನಿಸಿ ೧೯೮೫ರಲ್ಲಿ ಸರ್ಕಾರವು ಬಾಕಿ ಇದ್ದ ರೈತ ತನ್ನ ಸಾಲ ಪೂರಾ ಕಟ್ಟಿದಿದ್ದಲ್ಲಿ ಆತನ ಭೂಮಿಯನ್ನು ವಾಪಸ್ಸು ಕೊಡಲು ಆಜ್ಞೆ ಹೊರಡಿಸಿದೆ.

ಆ ಪ್ರಕಾರ ರೈತರು ತಮ್ಮ ಬಾಕಿ ಮೊತ್ತ ಕಟ್ಟಿ ಜಿಲ್ಲಾಧಿಕಾರಿಗಳಿಗೆ ತಮ್ಮ ಭೂಮಿಯನ್ನು ವಾಪಸ್ಸು ಬಿಡಲು ಅರ್ಜಿ ಹಾಕಿ ಒಂದು ವರ್ಷ ಮೀರಿ ಹೋಗಿದೆ ಆದರೂ ಭೂಮಿಗಳನ್ನು ವಾಪಸ್ಸು ಬಿಡುವ ಆರ್ಡರ್ ಆಗಿಲ್ಲ. ಇದರಿಂದ ಬಡ ರೈತರಿಗೆ ತೀರಲಾರದ, ಸಹಿಸಲಾರದ ತೊಂದರೆಯಾಗಿದೆ. ಪ್ರಯುಕ್ತ ಮಾನ್ಯ ಕಂದಾಯ ಮಂತ್ರಿಗಳು ಕಂದಾಯ ಕಮೀಷನ್‌ರವರ ದ್ವಾರ ರೈತರಿಗೆ ತಕ್ಷಣ ಭೂಮಿ ಸ್ವಾಧೀನಪಡಿಸುವ ಆಜ್ಞೆ ಕಳುಹಿಸಲು ಸಲಹೆ ಮಾಡುತ್ತೇನೆ. ತಡವಾದರೆ ತೀರಲಾರದ ನಷ್ಟ ವಾಗುತ್ತದೆಂದು ಈ ಮೂಲಕ ತಿಳಿಯಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—ಕಾನೂನು ಪ್ರಕಾರ ಅರ್ಹರಾದ ರೈತರಿಗೆ ಭೂಮಿ ಕೊಡಲಿಕ್ಕೆ ಕೂಡಲೇ ಆದೇಶ ಕೊಡುತ್ತೇನೆ.

7 ಮಧುಗಿರಿ ತಾಲ್ಲೂಕಿನ ಕೊಚಗೇನಹಳ್ಳಿ ಗ್ರಾಮದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ನೌಕರ ಶ್ರೀ ಕೆ. ನರಸೆಂಹಯ್ಯ ಎಂಬುವರನ್ನು ಕೊಲೆ ಮಾಡಿರುವ ವ್ಯಕ್ತಿಯನ್ನು ಬಿಡುಗಡೆ ಮಾಡಿರುವ ಬಗ್ಗೆ

ಶ್ರೀ ಎಸ್. ಬಂಗಾರಪ್ಪ. —ದಿನಾಂಕ ೮-೪-೧೯೮೫ರಂದು ಮಧುಗಿರಿ ತಾಲ್ಲೂಕಿನ ಕೊಡಿಗೇನ ಹಳ್ಳಿ ಗ್ರಾಮದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ನೌಕರರಾಗಿದ್ದ ಶ್ರೀ ಕೆ. ನರಸಿಂಹಯ್ಯ ಎಂಬುವರ ಕೊಲೆಯಾಗಿದ್ದು ಸಂಬಂಧಪಟ್ಟ ಆರೋಪಿಯನ್ನು ವಿಚಾರಣೆಗೊಳಪಡಿಸಲಾಗಿದೆ ಹಾಗೂ ಈ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಆದರೆ ಈ ಕೊಲೆಯ ಸಂಬಂಧ ಗ್ರಾಮದಲ್ಲಿ ಉಂಟಾದ ಗಲಭೆಯ ಪರಿಣಾಮವಾಗಿ ಕೆಲವು ಮುಗ್ಧ ಹರಿಜನರ ವಿರುದ್ಧ ಕೇಸು ದಾಖಲಾಗಿದ್ದು ಅವರು ಮಾತ್ರ ಕೋರ್ಟು ಕಛೇರಿಗಳಿಗೆ ಅಲೆಯುವಂತಾಗಿದೆ. ಮೊಕದ್ದಮೆಗೊಳಲಾದ ಹರಿಜನರು ಈ

ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಿದಾಗ್ಯೂ ಸಹ ಯಾವುದೇ ತರಹದ ಕ್ರಮ ಕೈಗೊಳ್ಳಲಾಗಿಲ್ಲ. ಗ್ರಾಮದ ಹರಿಜನರ ಬಗ್ಗೆ ಸತತವಾಗಿ ನಡೆಯುತ್ತಿರುವ ದಬ್ಬಾಳಿಕೆಯ ವಿರುದ್ಧ ಮತ್ತು ಅವರಿಗೆ ರಕ್ಷಣೆ ಕೊಡುವಲ್ಲಿ ವಿಫಲತೆಯನ್ನು ಸರ್ಕಾರದ ಗಮನಕ್ಕೆ ತರುವುದರೊಂದಿಗೆ ಈ ಬಗ್ಗೆ ತಕ್ಷಣ ಕಾರ್ಯಾಚರಣೆ ನಿರೀಕ್ಷಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—ಈಗ ಗೃಹ ಮಂತ್ರಿಗಳು ಸೋಲ್ಮನೆಯಲ್ಲಿದ್ದಾರೆ. ಆದ್ದರಿಂದ ಮುಂದಿನ ದಿನ ಸಭೆ ಸೇರಿದಾಗ ಉತ್ತರ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

೮) ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳಿಗೆ ಬಡ್ತಿ ಕೊಡುವ ಬಗ್ಗೆ.

ಶ್ರೀ ಎನ್. ಹೆಚ್. ಗೌಡ.—ಕರ್ನಾಟಕ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಪದವೀಧರ ಶಿಕ್ಷಕರ ಪರಿಸ್ಥಿತಿ ತೀರ್ಮಾನೀಯವಾಗಿದೆ. ಕಳೆದ ೮–೧೦ ವರ್ಷಗಳಿಂದ ಶಾಸಕರಲ್ಲಿ, ಸಚಿವರಲ್ಲಿ ಮತ್ತು ಇಲಾಖೆಯ ಮುಖ್ಯಸ್ಥರಲ್ಲೇ ಅನೇಕ ಸಲ ನಿವೇದಿಸಿಕೊಂಡರೂ ಅವರ ಬೇಡಿಕೆ ಕಾನನ ರೋದನವಾಗಿಯೇ ಉಳಿದಿದೆ. ಅವರು ಮುಖ್ಯ ತಮ್ಮ ಎರಡು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ.

೧. ಬಡ್ತಿ ಪ್ರಮಾಣವನ್ನು ಏರಿಸುವುದು.—ಹಿಂದೆ ರಾಜ್ಯದಲ್ಲಿ ಪ್ರೌಢಶಾಲೆಗಳ ಸಂಖ್ಯೆ ಬಹಳ ಕಡಿಮೆ ಇದ್ದಾಗ ಪದವೀಧರ ಶಿಕ್ಷಕರ ಬಡ್ತಿ ಪ್ರಮಾಣ ಶೇ. ೨೫ರಷ್ಟಿರಬೇಕು ಎಂದು ನಿಗಧಿಪಡಿಸಲಾಗಿತ್ತು, ಆದರೆ ಈಗ ರಾಜ್ಯದಲ್ಲೇ ಪ್ರೌಢಶಾಲೆಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಏರಿರುವುದರಿಂದ ಪದವೀಧರ ಪ್ರಾಥಮಿಕ ಶಿಕ್ಷಕರ ಬಡ್ತಿ ಪ್ರಮಾಣವನ್ನು ಶೇ. ೫೦ರಷ್ಟಕ್ಕಾದರೂ ಏರಿಸಬೇಕಾದ್ದು ಅನಿವಾರ್ಯವಾಗಿದೆ.

೨. ಬಿ. ಎಡ್. ತರಬೇತಿಗೆ ಅವಕಾಶ ಕಲ್ಪಿಸಿಕೊಡುವುದು.—ಕಳೆದ ಮೂರು ವರ್ಷಗಳ ಹಿಂದೆ ಸರ್ಕಾರ ಹೊರಡಿಸಿದ ಆಜ್ಞೆಯ ಪ್ರಕಾರ ಪ್ರಾಥಮಿಕ ಶಾಲೆಯಲ್ಲಿ ಕೆಲಸ ಮಾಡುತ್ತಿರುವ ಪದವೀಧರ ಶಿಕ್ಷಕರು ಬಿ ಎಡ್. ತರಬೇತಿಯನ್ನು ಪಡೆದರೆ ಮಾತ್ರ ಬಡ್ತಿಯನ್ನು ನೀಡಬೇಕೆಂದು ಕಡ್ಡಾಯಗೊಳಿಸಲಾಗಿದೆ. ಎ.ಎಡ್. ತರಬೇತಿಯನ್ನು ಪಡೆಯಲು ಪ್ರಾಥಮಿಕ ಪದವೀಧರ ಶಿಕ್ಷಕರಿಗೆ ರಾಜ್ಯದಲ್ಲಿ ಯಾವ ಅನುಕೂಲತೆಯೂ ಇಲ್ಲವಾಗಿದೆ. ಆದ್ದರಿಂದ ರಾಜ್ಯದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಈ ಹಿಂದೆ ಇದ್ದಂತೆ ಅಂಚೆ ತೆರಪಿನ ಬಿ.ಎಡ್. ತರಬೇತಿಯನ್ನು ನೀಡಲು ವ್ಯವಸ್ಥೆ ಆಗಬೇಕಾಗಿದೆ.

ಪ್ರಾಥಮಿಕ ಪದವೀಧರ ಶಿಕ್ಷಕರ ಮೇಲಿನ ಎರಡು ಜ್ವಲಂತ ಸಮಸ್ಯೆಗಳತ್ತ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—ಮಾನ್ಯ ಸದಸ್ಯರು ಪ್ರಾಥಮಿಕ ಶಾಲಾ ಉಪಾಧ್ಯಾಯರ ಅತಿ ಮಹತ್ವವಾದ ಬೇಡಿಕೆಗಳ ಬಗ್ಗೆ ಬಹಳ ವಿವರವಾದ ವಿಚಾರಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಈ ವಿಚಾರವನ್ನು ಶಿಕ್ಷಣ ಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಉತ್ತರವನ್ನು ಮುಂದಿನ ಸಭೆಯಲ್ಲಿ ಕೊಡಲಿಕ್ಕೆ ಹೇಳುತ್ತೇನೆ.

೯) ಬೆಂಗಳೂರು ನಗರದಲ್ಲಿ ಮಕ್ಕಳ ಅಪಹರಣವಾಗುತ್ತಿರುವ ಬಗ್ಗೆ.

ಶ್ರೀ ಎಂ. ಎಸ್. ಕೃಷ್ಣನ್.—ಬೆಂಗಳೂರು ನಗರದಲ್ಲಿ ಮಕ್ಕಳ ಅಪಹರಣದ ಬಗ್ಗೆ ಅನೇಕ ದೂರುಗಳೂ, ಉಹಾಪೋಹಗಳೂ ಹಬ್ಬಿವೆ. ಕೆಲವು ನಿದರ್ಶನಗಳು ಇದಕ್ಕೆ ಪುರಾವೆ ಇದೆ.

೨೧–೮–೧೯೮೫ರ ಬೆಳಿಗ್ಗೆ ೧೦ಕ್ಕೆ, ೧೦ ವರ್ಷದ ಕುಮಾರಿ ತಬನಾ ಫಾತಿಮಾ ಎಂಬ ಯಶವಂತಪುರದಲ್ಲಿ ವಾಸಿಸುವ ಹುಡುಗಿಯು ತನ್ನ ಶಾಲೆಗೆ (ಮಹಮ್ಮದ್ ಶರೀಫ್ ಶಾಲೆ) ಹೋಗುತ್ತಿದ್ದಳು. ಆವಳ ಅಕ್ಕ ರಜಿಯಾಸುಲ್ತಾನ ಕೂಡ ಇದ್ದಳು. ಆವಳ ತಾಯಿ ಶ್ರೀಮತಿ ಜಹರುನ್ನಿ ಶಾಬಿಯವರು ಪಕ್ಕದ ಜಿಲ್ಲಾ ಅಭಿವೃದ್ಧಿ ಮಂಡಳಿಯ ಕಟ್ಟಡದ ಬಳಿ ಹೋಗಿದ್ದಾಗ ಕೆಲವು ಅಗುಂತಕರು ಕಾರಿನಲ್ಲಿ ಬಂದು ಈ ಹುಡುಗಿಯನ್ನು (ತಬನಾಫಾತಿಮಾ) ಅಪಹರಿಸಿಕೊಂಡು ಹೋಗಲು ಕಾರಿನಲ್ಲಿ